**ಕರ್ನಾಟಕ ಲೋಕಸೇವಾ ಆಯೋಗ**

ದೂರವಾಣಿ: 22268390, ಫಾಕ್ಸ್: 22266481

ಅಂಚೆ ಪೆಟ್ಟಿಗೆ ನಂ. 5056

ಇ-ಮೇಲ್ :kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ

"ಉದ್ಯೋಗ ಸೌಧ ",

ವೆಬ್ ಸೈಟ್: http://kpsc.kar.nic.in

ಸಂಖ್ಯೆ:ಆರ್(1) 814/2023-24/ಪಿಎಸ್ ಸಿ

ದಿನಾಂಕ: 11/12/2023

ಅಡಕಗಳು: ① KSAT ಅರ್ಜಿ 2688/2023 ಆದೇಶ
② dt - 6/6/20 & 1/12/23ರ H.K ಸುತ್ತೋಲೆ
③ ಆಯೋಗದ ಸಭಾ ನಡವಳಿ ದಿನಾಂಕ - 5-12-23.

ಇಂದ:

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ,

ಬೆಂಗಳೂರು.

**" ಅತಿ ತುರ್ತು"**

ಇವರಿಗೆ:-

ಸರ್ಕಾರದ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ವಿಧಾನಸೌಧ,

ಬೆಂಗಳೂರು.

ಮಾನ್ಯರೆ,

ವಿಷಯ:- ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ಹೈದ್ರಾಬಾದ್ ಕರ್ನಾಟಕ ಮೀಸಲಾತಿಯ ದಿನಾಂಕ:01-02-2023ರ ಸುತ್ತೋಲೆಯನ್ನು ರದ್ದುಪಡಿಸಿರುವ ಬಗ್ಗೆ

ಉಲ್ಲೇಖ:- 1. ಮಾನ್ಯ KSAT ಅರ್ಜಿ ಸಂಖ್ಯೆ: 2688-2689/2023, ದಿನಾಂಕ:08-11-2023ರ ಆದೇಶ
2. ಆಯೋಗದ ಸಭಾ ನಡವಳಿ ದಿನಾಂಕ:05-12-2023

*****

ಆಯೋಗವು ದಿನಾಂಕ:21-02-2022ರಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಸಹಾಯಕ ಇಂಜಿನಿಯರ್ (ಗ್ರೇಡ್-1) 229+59 (ಹೈ.ಕ) ಹುದ್ದೆಗಳಿಗೆ ಅಧಿಸೂಚನೆ ಜಾರಿಮಾಡಿದ್ದು, ಹೈ.ಕ ಮೀಸಲಾತಿಯ ಹುದ್ದೆಗಳ ಜಾರಿ ಸಂಬಂಧ ದಿನಾಂಕ: 06.06.2020ರ ಸುತ್ತೋಲೆಯಂತೆ ಕ್ರಮವಹಿಸಲಾಗಿರುತ್ತದೆ. ಆದರೆ ಸರ್ಕಾರವು ದಿನಾಂಕ:01-02-2023ರಂದು ಜಾರಿ ಮಾಡಿರುವ ಹೈ.ಕ. ಮೀಸಲಾತಿ ಸುತ್ತೋಲೆಯಲ್ಲಿ ದಿನಾಂಕ:06-06-2020ನ್ನು ಹಿಂಪಡೆದು, ಸದರಿ ಸುತ್ತೋಲೆಯನ್ವಯ " ಅಧಿಸೂಚನೆ ಹೊರಡಿಸಿ ಅಂತಿಮ ಆಯ್ಕೆಪಟ್ಟಿ ಪ್ರಕಟಿಸದೇ ಇದ್ದಲ್ಲಿ ಅಂತಹ ನೇಮಕಾತಿ ಪ್ರಕ್ರಿಯೆಗಳಿಗೆ ಸೀಮಿತವಾಗಿ ಮಾತ್ರ ಅರ್ಜಿ ಸಲ್ಲಿಸುವ ಸಮಯದಲ್ಲಿ ಸ್ಥಳೀಯ ಅಭ್ಯರ್ಥಿಗಳಿಂದ ಪಡೆಯಲಾಗಿರುವ ಆಯ್ಕೆಯನ್ನು ಪರಿಗಣಿಸದೇ, ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿ ತಯಾರಿಸುವಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ಪರಿಗಣಿಸಿ ಆಯ್ಕೆಪಟ್ಟಿ ತಯಾರಿಸುವುದು ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪರಿಗಣಿಸಿ ಆಯ್ಕೆಪಟ್ಟಿ ತಯಾರಿಸುವಂತೆ ಸೂಚಿಸಿರುತ್ತದೆ." ಅದರನ್ವಯ ಆಯೋಗವು ದಿನಾಂಕ:17-08-2023ರಂದು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಿರುತ್ತದೆ.

ಈ ಸಂಬಂಧ ಆಯ್ಕೆಯಾಗದ ಅಭ್ಯರ್ಥಿಗಳಾದ ಶ್ರೀ ಧನಂಜಯ ಎಂ ಮತ್ತು ಶ್ರೀ ಸಾಗರ್ ಡಿ.ಎಸ್. ಇವರು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:2688-2689/2023ನ್ನು ದಾಖಲಿಸಿದ್ದು ಸರ್ಕಾರವು ದಿನಾಂಕ:06-06-2020ರಂದು ಜಾರಿಗೊಳಿಸಿದ್ದ ಹೈದ್ರಾಬಾದ್ ಕರ್ನಾಟಕ ಮೀಸಲಾತಿ ಸುತ್ತೋಲೆ ಬದಲಾಗಿ ಆಯ್ಕೆಪಟ್ಟಿಯನ್ನು ಸರ್ಕಾರವು ದಿನಾಂಕ:01-02-2023ರಂದು ಜಾರಿ ಮಾಡಿರುವ ಹೈ.ಕ. ಮೀಸಲಾತಿ ಸುತ್ತೋಲೆಯನ್ವಯ ಪ್ರಕಟಿಸಿರುವುದು ಕಾನೂನು ಬಾಹಿರವೆಂದು ಮಾನ್ಯ ನ್ಯಾಯಾಯಲದಲ್ಲಿ ಪ್ರಕರಣ ದಾಖಲಿಸಿದ್ದರು.

...2

ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯ ಮಂಡಳಿಯು ದಿನಾಂಕ:08-11-2023ರಂದು ನೀಡಿರುವ ಅಂತಿಮ ಆದೇಶವು ಕೆಳಕಂಡಂತಿರುತ್ತದೆ.

> "The Application succeeds. The impugned circular bearing No CAaSuE03HiKaKo 2019 dated:01-02-2023 (Annexure-A7) issued by the 1st Respondent is quashed being perverse in nature and deprives meritorious local persons who have claimed local cadre reservation of the benefit of being allocated to the local cadre concerned. The preparation of the provisional and final select list shall follow the allocation principle that we have stated above to safeguard the interest of merit based allocations to the local cadre concerned and to the residual parent cadre."

ಮೇಲ್ಕಂಡ ಆದೇಶದ ಕುರಿತಂತೆ ಆಯೋಗವು ದಿನಾಂಕ:05-12-2023ರ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ್ದು, ಮಾನ್ಯ ನ್ಯಾಯ ಮಂಡಳಿಯ ಆದೇಶವನ್ನು ಪಾಲಿಸಿದ್ದಲ್ಲಿ ಹಲವು ನೇಮಕಾತಿ ಅಧಿಸೂಚನೆಗಳಿಗೆ ತೊಂದರೆಯಾಗುವುದರಿಂದ ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ತುರ್ತಾಗಿ ಸಲ್ಲಿಸಲು ತೀರ್ಮಾನಿಸಿರುತ್ತದೆ (ಪ್ರತಿ ಲಗತ್ತಿಸಿದೆ).

ಸದರಿ ಪ್ರಕರಣದಲ್ಲಿ ನಿಯಮಗಳನ್ನು ರೂಪಿಸುವ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಮೊದಲನೇ ಪ್ರತಿವಾದಿಯಾಗಿದ್ದು, ಮಾನ್ಯ ನ್ಯಾಯ ಮಂಡಳಿಯು ರದ್ದುಪಡಿಸಿರುವ ಆದೇಶದ ಕುರಿತಂತೆ ಸರ್ಕಾರದ ನಿಲುವು ಈ ವಿಷಯದಲ್ಲಿ ಅತೀ ಮುಖ್ಯವಾಗಿರುತ್ತದೆ. ಆದ್ದರಿಂದ ಸದರಿ ವಿಷಯವನ್ನು ಅತೀ ಜರೂರು ಎಂದು ಪರಿಗಣಿಸಿ ತಮ್ಮ ನಿಲುವನ್ನು ಶೀಘ್ರವಾಗಿ ತಿಳಿಸುವಂತೆ ಕೋರಿದೆ.

ತಮ್ಮ ವಿಶ್ವಾಸಿ

ಸಹಿ/-
(ಕೆ.ಎಸ್.ಲತಾಕುಮಾರಿ)
ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ